

# ಪ್ರಪಂಚದ ಸಣ್ಣಮ್ಮ



ಪ್ರಪಂಚದಲ್ಲಿಯೇ ಅತೀ ಸಣ್ಣ ಅಥವಾ ಕುಳ್ಳ ಅಮ್ಮ ಈಗ ಸುದ್ದಿಯಲ್ಲಿದ್ದಾಳೆ.

ಕಾರಣ ಇಷ್ಟೇ. ಆಕೆ ಮೂರನೇ ಮಗುವಿಗೆ ಜನ್ಮ ನೀಡುವ ಕಾಲ ಬಂದಿದೆಯಂತೆ. ಆಕೆಯ ಹೆಸರು ಸ್ಟೇಸಿ ಹೆರಾಲ್ಡ್, ವಯಸ್ಸು 35, ಎತ್ತರ ಎರಡು ಅಡಿ ನಾಲ್ಕು ಇಂಚು. ಈಕೆಯ ವಾಸ ಅಮೆರಿಕಾದ ಕೆಂಟುಕಿಯ ಒಣ ಪರ್ವತ ಸಾಲು.

'ಅಪರಿಪೂರ್ಣ ಅಸ್ಥಿ ರಚನೆ' ಯ ಕಾಯಿಲೆಯನ್ನು ಹೊಂದಿರುವ ಈಕೆಯ ದೇಹದಲ್ಲಿ ಭಂಗುರ ಎಲುಬು ಮತ್ತು ಸಂಪೂರ್ಣ ಬೆಳೆಯದ ಶ್ವಾಸಕೋಶಗಳಿವೆ.

ಕತೇರಿ ಮತ್ತು ಮಕಾಯಾ ಎನ್ನುವ ಎರಡು ಹೆಣ್ಣು ಮಕ್ಕಳನ್ನು ಈಗಾಗಲೇ ಹೊಂದಿರುವ ಹೆರಾಲ್ಡ್ ಈಗ ಮೂರನೇ ಮಗುವಿಗೆ ಜನ್ಮ ನೀಡಲು ದಿನಗಳನ್ನು ಎಣಿಸುತ್ತಿದ್ದಾಳೆ. ಮೂರನೇ ಮಗುವಿಗೆ ಜನ್ಮ ನೀಡಿದರೆ ಅದೊಂದು ಪವಾಡವೇ ಸರಿ ಎನ್ನುತ್ತಾಳೆ. ವೈದ್ಯರು ಮತ್ತು ಮನೆಯ ಹಿರಿಯರು, 'ಈ ಪುಟ್ಟ ಹೊಟ್ಟೆಯಲ್ಲಿ ಮಗುವಿಗೆ ಜನ್ಮ ನೀಡಲು ಪ್ರಯತ್ನಿಸಿದರೆ ಜೀವಕ್ಕೆ ಅಪಾಯ' ಎಂದು ಎಚ್ಚರಿಸಿದ್ದಾರೆ. ಆದರೆ 'ಎರಡು ಮಕ್ಕಳಿಗೆ ಜನ್ಮ ನೀಡಿಲ್ಲವೇ? ದೇವರಿದ್ದಾನೆ' ಎನ್ನುತ್ತಾಳೆ ಹೆರಾಲ್ಡ್.

ಇದೆಲ್ಲಕ್ಕೂ ಹೆಚ್ಚಾಗಿ ಈಕೆಯನ್ನು ಪ್ರೀತಿಸಿ ಮದುವೆಯಾದ 'ವಿಲ್'ನೇ ಈಕೆಗೆ ವಿಲ್ ಪವರ್ ಅಂತೆ. ವಿಲ್ ಐದು ಅಡಿ ಒಂಭತ್ತು ಇಂಚು ಎತ್ತರ ಇದ್ದಾನೆ. ಸೂಪರ್ ಮಾರ್ಕೆಟ್ ಒಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದ ಈರ್ವರ ನಡುವೆ 2000ದಲ್ಲಿ ಪ್ರೇಮಾಂಕುರ ಆಗಿತ್ತು; 2004ರಲ್ಲಿ ಮದುವೆಯಾಗಿದ್ದಾರೆ.

■ ವಸಂತ್ ಮಾಲವಿ.